# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

## ತಪ್ಪಿಹೋದ ಮಗನು



ಬರಹಗಾರರು: Edward Hughes
ಚಿತ್ರಲೇಖಕರು: Alastair Paterson; Lazarus
ಅಳವಡಿಸುವವರು: Ruth Klassen; Sarah S.
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಯೇಸು ಜನರಿಗೆ
ದೇವರ ಕ್ಷಮಾಪನೆಯ ಬಗ್ಗೆ
ಹೇಳುತ್ತಿದ್ದನು. ಆದರೆ ಯೆಹೂದ್ಯರು
ಯೇಸು ಪಾಪಿಗಳ ಸಂಗಡ
ಸ್ನೇಹಬೆಳೆಸುವುದನ್ನು ದೂರುತ್ತಿದ್ದರು.
ಅದಕ್ಕಾಗಿ ಯೇಸು ಮೂರು
ಕಥೆಗಳನ್ನು ಅವರಿಗೆ ವಿವರಿಸಿ,
ಪಾಪಿಗಳು ಪಶ್ಚಾತಾಪ ಪಟ್ಟಾಗ
ದೇವರು ಹೇಗೆ ಸಂತೋಷಿಸುತ್ತಾನೆ
ಎಂದು ತೋರಿಸಿದನು.



ಮೊದಲನೆಯ ಕಥೆಯಲ್ಲಿ
ಒಬ್ಬ ಮನುಷ್ಯನಿಗೆ ನೂರು
ಕುರಿಗಳಿದ್ದವು. ಒಂದು
ಕಳೆದು ಹೋಯಿತು.

ಆಗ ಅವನು ಅದೇ ಕ್ಷಣದಲ್ಲಿ
ತನ್ನ ತೋಂಬತ್ತೋಂಬತ್ತು
ಕುರಿಗಳನ್ನು ಅಲ್ಲೇ ಬಿಟ್ಟು
ಕಳೆದುಹೋದ
ಕುರಿಯನ್ನು
ಹುಡುಕಲು
ಹೊರಟನು.



ಕುರುಬನು ಕಳೆದುಹೊದ
ಕುರಿಯು ಸಿಗುವವರೆಗೆ
ಹುಡುಕಾಡಿದನು. ಅದು ಸಿಕ್ಕಾಗೆ
ಅದನ್ನು ತನ್ನ ಹೆಗಲ ಮೇಲೆ
ಇಟ್ಟುಕೊಂಡು ಸೊಂತೋಷದಿಂದ
ಹಿಂತಿರುಗಿ ತನ್ನ ಸ್ನೆಹಿತರಿಗೆ ಈ
ಕುರಿಯು ಕಳೆದು ಹೊಗಿತ್ತು
ಆದರೆ ಮತ್ತೆ ನನಗೆ ಸಿಕ್ಕಿತು,

ಎಲ್ಲರು ನನ್ನೊಡನೆ ಸಂತೋಷಿಸಿ
ಎಂದು ಹೇಳಿದನು.

ಒಬ್ಬ ಪಾಪಿಯು ತನ್ನ ಪಾಪಗಳಿಂದ
ಪಶ್ಚಾತಾಪ ಪಡುವುದಾದರೆ
ಪರಲೋಕದಲ್ಲಿ ಮಾಹಾ
ಸಂತೋಷವಿರುತ್ತದೆಂದು
ಯೇಸು ವಿವರಿಸಿದನು.
ಪಶ್ಚಾತಾಪ ಪಡುವುದೆಂದರೆ
ನಮ್ಮ ಪಾಪಗಳನ್ನು
ಒಪ್ಪಿಕೊಂಡು ಮತ್ತೆ
ಅವುಗಳನ್ನು
ಮಾಡದಿರುವುದಾಗಿದೆ.





ಯೇಸು ಮತ್ತೊಂದು ಕಥೆಯನ್ನು ಹೇಳಿದನು ಅದೇನೆಂದರೆ– ಒಬ್ಬ ಸ್ತ್ರೀಯ ಹತ್ತಿರ ಹತ್ತು ನಾಣ್ಯಗಳಿದ್ದವು. ಅದು ಅವಳ ಎಲ್ಲಾ ಸಂಪಾದನೆಯಾಗಿರಬಹುದು. ಒಂದು ದುರದುಷ್ಟಕರ ಸಂಗತಿ ನಡೆಯಿತು. ಆವಳಲ್ಲಿದ್ದ ನಾಣ್ಯಗಳಲ್ಲಿ ಒಂದು ನಾಣ್ಯ ಕಳೆದು ಹೋಯಿತು.

ಅವಳು ಮನೆಯನ್ನು ಗೂಡಿಸಿ! ಗೂಡಿಸಿ! ಗೂಡಿಸಿ! ಎಲ್ಲಾ ಕಡೆಯು ಹುಡುಕಾಡಿದಳು. ಕೊನೆಯಲ್ಲಿ ಅವಳಿಗೆ ಕಳೆದುಕೊಂಡ ನಾಣ್ಯವು ಸಿಕ್ಕಿತು. ಅವಳಿಗೆ ತುಂಬಾ ಆನಂದವಾಗಿ ಏನು ಮಾಡಿದಳು ಗೊತ್ತೇ? ಅವಳು ತನ್ನ ಎಲ್ಲಾ ಸ್ನೇಹಿತರಿಗೂ ಹೇಳಿದಳು.





“ಒಬ್ಬ ಪಾಪಿಯು
ತನ್ನ ಪಾಪಗಳಿಂದ
ಪಶ್ಚಾತ್ತಾಪ
ಪಡುವುದಾದರೆ
ದೇವರ
ಸಮ್ಮುಖದಲ್ಲಿ
ದೇವದೂತರು
ಸಂತೋಷಿಸುವರು”
ಎಂದು ಯೇಸು
ಹೇಳಿದನು.

ಯೇಸು ಹೇಳಿದ ಮೂರನೆಯ ಕಥೆಯು ದುಃಖದಿಂದ ಕೂಡಿತ್ತು. ಅದು ಒಬ್ಬ ಹುಡುಗನು ತನ್ನ ತಂದೆಯ ಮನೆಯನ್ನು ಬಿಟ್ಟು ಹೋದ ಕಥೆಯಾಗಿತ್ತು.



ದೂರದ ದೇಶಕ್ಕೆ ಹೋಗಿ ಮನ ಬಂದಂತೆ ತನ್ನ ಎಲ್ಲಾ ಹಣವನ್ನು ವ್ಯಯ ಮಾಡಿದನು. ಅದೇ ಸಮಯಕ್ಕೆ ಅಲ್ಲಿ ಬರಗಾಲ ಬಂತು, ಏನು ಮಾಡಬೇಕೆಂದು ಆ ಹುಡುಗನಿಗೆ ತಿಳಿಯದೆ ಹೊದದ್ದರಿಂದ ಹಸಿವೆಯಿಂದ ಬಳಲಿ ಸಾಯುವ ಹಾಗಾದನು.



ಹಸಿವೆಯನ್ನು ತಿರಿಸಿಕೊಳಲು ಆ ಹುಡುಗನು ಹಂದಿಗಳನ್ನು ಕಾಯುವ ಕೆಲಸಕ್ಕೆ ಸೇರಿದನು. ಆದರೆ ಅವನಿಗೆ ಯಾರೂ ಆಹಾರವನ್ನು ಕೊಡಲಿಲ್ಲ. ಹಂದಿಗೆ ಹಾಕುವ ಆಹಾರವನ್ನು ತಿಂದು ಹಸಿವೆಯನ್ನು ತೀರಿಸಿಕೊಳ್ಳಲು ಆಶೆಪಟ್ಟನು. ಆಗ ಅವನಿಗೆ ಬುದ್ಧಿಬಂತು, ತನ್ನ ತಂದೆಯ ಮನೆಯಲ್ಲಿ ಆಳುಗಳು ಸಹ ಹೊಟ್ಟೆ ತುಂಬಾ ಊಟಮಾಡುತ್ತಾರೆಂದು ನೆನಪಿಗೆ ತಂದುಕೊಂಡನು.





“ನಾನು ತಂದೆಯ ಮನೆಗೆ ಹೋಗಿ
ನಾನು ಮಾಡಿದ ಪಾಪಕ್ಕೆ
ಕ್ಷಮಾಪನೆ ಕೇಳುವೆನು, ಅವನ
ಮಗನೆನಿಸಿಕೊಳ್ಳಲು ಯೋಗ್ಯನಲ್ಲ,
ನನನ್ನು ತನ್ನ ಸೇವಕರಲ್ಲಿ
ಒಬ್ಬನನ್ನಾಗಿ ಮಾಡಿಕೊಂಡರೆ
ಸಾಕು” ಎಂದು ನೆನೆಸಿದನು.

ಆ ಹುಡುಗನು ಮನೆಯಿಂದ ಇನ್ನೂ ದೂರದಲ್ಲಿರುವಾಗ, ಅವನ ತಂದೆ ಮಗನು ಬರುವದನ್ನು ಕಂಡನು. ಸಂತೋಷದಿಂದ, ಮರಳಿಬರುತ್ತಿರುವ ತನ್ನ ಮಗನ ಕಡೆಗೆ ಒಡಿದನು, ಆತನಿಗೆ ಮುದ್ದಿಟ್ಟು ಅಪ್ಪಿಕೊಂಡನು.





‘ತಂದೆಯೆ, ನಾನು ಪಾಪ ಮಾಡಿದ್ದೇನೆ, ನಾನು ನಿನ್ನ ಮಗನಾಗಿರಲು ಯೋಗ್ಯನಲ್ಲ’ ಎಂದು ಹೇಳಿ ನಿನ್ನ ಆಳುಗಳಲ್ಲಿ ನನ್ನನ್ನು ಒಬ್ಬನನ್ನಾಗಿ ಸೇರಿಸಿಕೊ ಎಂದು ಕೇಳಿಕೋಳ್ಳಬೇಕೆನ್ನುತ್ತಿರಲು, ತಂದೆಯು ಮಧ್ಯ ಮಾತನಾಡಿ, ಶ್ರೇಷ್ಟವಾದ ನೀಲುವಂಗಿಯನ್ನು, ಚಪ್ಪಲಿಯನ್ನು, ಮತ್ತು ಉಂಗುರವನ್ನು ಹಾಕಿರಿ, ಒಂದು ಹಬ್ಬವನ್ನು ಏರ್ಪಡಿಸಿರಿ’ ಎಂದು ಆಳುಗಳಿಗೆ ಅಪ್ಪನೆಮಾಡಿದನು.

ಕಳೆದುಹೋದ ಮಗನು ಮತ್ತೆ ಸಿಕ್ಕಿದ್ದರಿಂದ ಅಲ್ಲಿ ಒಂದು ಅದ್ಭುತವಾದ ಹಬ್ಬದ ವಾತಾವರಣ ನಿರ್ಮಾನವಾಗಿತ್ತು. ಪಾಪಿಗಳು ತಮ್ಮ ಪಾಪಗಳಿಗೆ ಪಶ್ಚಾತಾಪ ಪಡುವುದಾದರೆ ದೇವರು ಅವರನ್ನು ಯಾವರೀತಿಯಾಗಿ ಪ್ರೀತಿಸುತ್ತಾನೆ ಎಂದು ಹೇಳಲು ಯೇಸು ಈ ಕಥೆಯನ್ನು ಹೇಳಿದನು.



ತಪ್ಪಿಹೋದ ಮಗನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಲೂಕ 15

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

45

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16